**ಅ.ದಾ.ಸಂ. 103/2020 ಪಿ.ಡಬ್ಲೂ.3**

**<u>ದಿನಾಂಕಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದಃ</u>**

1) ನಾನು ಹತ್ತನೇ ತರಗತಿಯವರೆಗೂ ವಿದ್ಯಾಭಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಗಳ ಪರಿಚಯ ಇದೆ. ನನ್ನ ಸಂಬಂಧಿ ಜಯರತ್ನಮ್ಮ ರವರು ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತು ಸರ್ವೆ ನಂಬರ್ ಗೆ ಒಳಪಟ್ಟಿದ್ದ ಸಮಯದಲ್ಲಿ ಅದನ್ನು ಜಯರತ್ನಮ್ಮ ರವರು ವಾದಿಗೆ ಮಾರಾಟ ಮಾಡಿರುತ್ತಾರೆ.

2) 1 ನೇ ಪ್ರತಿವಾದಿಯ ಮನೆಯ ಬಳಿ ಮುಂದೆ ಬೇರೆ ಬೇರೆ ಜಮೀನುಗಳಿಗೆ ಹೋಗಲು ಸರ್ಕಾರಿ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಕಳೆದ ಒಂದೂವರೆ ತಿಂಗಳಿನಿಂದ ದುರಸ್ತಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ರಸ್ತೆ ನಂತರ ವಾದಿಗೆ ಸೇರಿದ ಜಾಗ ಇದೆ ಎಂದರೆ ಸರಿ. ಸದರಿ ರಸ್ತೆಯ ಪಶ್ಚಿಮ ದಿಕ್ಕಿಗೆ ವಾದಿಯ ಸ್ವತ್ತು ಇರುತ್ತದೆ. ಸದರಿ ರಸ್ತೆಯ ಪೂರ್ವ ದಿಕ್ಕಿಗೆ 1ನೇ ಪ್ರತಿವಾದಿಗೆ ಸೇರಿದ ಸ್ವತ್ತು ಇರುತ್ತದೆ. ವಾದಿ ಮತ್ತು 1ನೇ ಪ್ರತಿವಾದಿಯ ಮನೆಗಳ ನಡುವೆ 25 ರಿಂದ 30 ಅಡಿಗಳ ರಸ್ತೆ ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ರಸ್ತೆಯನ್ನು ವಾದಿ ಒತ್ತುವರಿ ಮಾಡಿಕೊಂಡಿದ್ದರು ಎಂದು ಹೇಳಿ ಒತ್ತುವರಿ ಜಾಗವನ್ನು ತೆರವುಗೊಳಿಸುವಂತೆ ವಾದಿಗೆ ತಹಶೀಲ್ದಾರ್ ಮತ್ತು ಪಿ.ಡಿ.ಓ ರವರು ನೋಟೀಸನ್ನು ನೀಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ನೋಟೀಸು ನೀಡಿದ ನಂತರ ಪಿ.ಡಿ.ಓ ರವರು ಖುದ್ದು ಸ್ಥಳಕ್ಕೆ ಹೋಗಿ ಒತ್ತುವರಿ ಮಾಡಿದ ಸ್ಥಳದಿಂದ ವಾದಿಯನ್ನು ತೆರವುಗೊಳಿಸಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ಪಿಡಬ್ಲೂ-4 ರಾಜು ರವರು ನನ್ನ ಮಾಮ್ಮಗ. ಆತ ಈ ಮೇಲೆ ಹೇಳಿದ ಜಯರತ್ನಮ್ಮ ರವರ ಮಗ. ಜಯರತ್ನಮ್ಮ ರವರು ಈ ಮೇಲೆ ಹೇಳಿದ ರಸ್ತೆಯ ಜಾಗವನ್ನು ಕಳೆದು ಉಳಿದ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ

ಗೊತ್ತಿಲ್ಲ. 1ನೇ ಪ್ರತಿವಾದಿಯ ಜಾಗ ರಸ್ತೆಗೆ ಹೋಗಿರುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ವಾದಿಯ ಜಾಗಕ್ಕೆ ಹೋಗಿಲ್ಲ ಮತ್ತು ಆಕೆಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ವಾದಿಗೆ ಯಾವುದೇ ರೀತಿ ತೊಂದರೆ ಕೊಡದೇ ಇದ್ದರೂ ಸಹ ವಾದಿಗೆ ನನ್ನ ಅತ್ತೆ ದಾವಾ ಸ್ವತ್ತನ್ನು ಮಾರಾಟ ಮಾಡಿರುವ ಕಾರಣ ಆಕೆಗೆ ಸಹಾಯ ಮಾಡಲು ಆಕೆಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**